ಅಧ್ಯಕ್ಷರು:– ಪ್ರಸ್ತಾವನವನ್ನು ಮಂಡಿಸಲಾಯಿತು. ಈಗ ಅದನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವನೆ ಹೀಗಿದೆ, 2014ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿಯನ್ನು ನೀಡಬೇಕು.

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕೃತವಾಗಿದೆ.

ಅಧ್ಯಕ್ಷರು:– ವಿಧೇಯಕವನ್ನು ಮಂಡಿಸಲಾಯಿತು.

(ಈ ಹಂತದಲ್ಲಿ ಬಿ.ಜೆ.ಪಿ ಸದಸ್ಯರು ಸದನದ ಬಾವಿಯಲ್ಲಿ ಘೋಷಣೆಗಳನ್ನು ಕೂಗುತ್ತಾ ಧರಣಿಯಲ್ಲಿ ನಿರತರಾಗಿದ್ದರು)

ಆ. ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಪರ್ಯಾಲೋಚನಾ ಪ್ರಸ್ತಾವ

ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2014

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ, ಬಗರ್‌ಹುಕುಂ ಸಾಗುವಳಿ ಸಮಿತಿಗೆ (ಗೊಂದಲ).....ವಿಲೇವಾರಿಗೆ ಸಂಬಂಧಿಸಿದಂತೆ 2016ರವರೆಗೆ ಪ್ರಸ್ತಾವನೆ (ಗೊಂದಲ)....ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2014ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು:– ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

2014ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಸಭೆ ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ

2 ನೇ ಖಂಡವು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

2 ನೇ ಖಂಡವು ವಿಧೇಯಕದ ಅಂಗವಾಯಿತು.

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂಬುದು ಸಭೆಯ ಮುಂದಿರುವ ವಿಷಯ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) (ತಮ್ಮ ಸ್ಥಾನದಿಂದ):– CBI ತನಿಖೆ ಆಗಲೇಬೇಕು. ಕೋಟ್ಯಾಂತರ ರೂಪಾಯಿಗಳ ಭ್ರಷ್ಟಾಚಾರ ಮಾಡಿದಂತಹ ಸರ್ಕಾರಕ್ಕೆ ಧಿಕ್ಕಾರ. Wholesale de-notify ಮಾಡಿದಂತಹ ಸರ್ಕಾರಕ್ಕೆ ಧಿಕ್ಕಾರ.

(ಗೊಂದಲ)

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಗಿದೆ.

ಪ್ರಸ್ತಾವದ ಅಂಗೀಕಾರ

ಅಧ್ಯಕ್ಷರು:– ಮಾನ್ಯ ಸಚಿವರು ಅಂಗೀಕಾರ ಪ್ರಸ್ತಾವವನ್ನು ಮಂಡಿಸಬಹುದು.

(ಗೊಂದಲ)

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2014 ಅನ್ನು ಅಂಗೀಕರಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು:– ಪ್ರಸ್ತಾವವನ್ನು ಮಂಡಿಸಲಾಗಿದೆ

ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

2014ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

(ಅನುಬಂಧ–11)

(ಗೊಂದಲ)

ಅಧ್ಯಕ್ಷರು:– ಒಂದು ನಿಮಿಷ ದಯವಿಟ್ಟು ಸ್ವಲ್ಪ ಕೇಳಿ. ನಾನು ಏಕೆ ಹೇಳುತ್ತೇನೆ ಎಂದರೆ, ಈ ಬಗರ್‌ಹುಕುಂ ಮಂಜೂರು ಮಾಡುವುದಕ್ಕೋಸ್ಕರವಾಗಿ 1991ರಲ್ಲಿ ಆಗಿತ್ತು. ತದನಂತರ . ..

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಸರ್ ಬಿಲ್ ಬಗ್ಗೆ basic ಆಗಿ ನಮ್ಮದು ಏನೂ ಇದರಲ್ಲಿ ತಕರಾರಿಲ್ಲ. ಒಂದು ವಾರದ ಮುಂಚೆಯೇ ಪಾಸ್ ಮಾಡಿಕೊಳ್ಳಬಹುದಾಗಿತ್ತು.

(ಗೊಂದಲ)

ಅಧ್ಯಕ್ಷರು:– ನಾನು ಹೇಳುವುದು ಅದಕ್ಕಲ್ಲ. ಏಕೆಂದರೆ, ಇಷ್ಟು ವರ್ಷಗಳಾದರೂ, 14–16 ವರ್ಷಗಳಾದರೂ ಇನ್ನೂ 5–6 ಲಕ್ಷ ಅರ್ಜಿಗಳು ಹಾಗೆಯೇ ಉಳಿದಿವೆ ಎಂದರೆ, . . .

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಅದನ್ನು ಇನ್ನೂ ಭದ್ರ ಮಾಡಬಹುದಾಗಿತ್ತು.

(ಗೊಂದಲ)

ಅಧ್ಯಕ್ಷರು:– ಮಾನ್ಯ ಶೆಟ್ಟರೆ, ಅದಕ್ಕೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಉತ್ಸಾಹ ತೋರಿಸಿ. ಈ ಅರ್ಜಿಗಳನ್ನು ಶೀಘ್ರಗತಿಯಲ್ಲಿ ವಿಲೇವಾರಿ ಮಾಡುವುದಕ್ಕೆ ನೀವೆಲ್ಲಾ ಆಸಕ್ತಿ ವಹಿಸಿ ಅದು ಒಂದು.

ಶ್ರೀ ಜಗದೀಶ್ ಶೆಟ್ಟರ್:– ಆಯಿತು. ತಮ್ಮ ಸಲಹೆಯನ್ನು ಮನಃಪೂರ್ವಕವಾಗಿ ಒಪ್ಪುತ್ತೇವೆ.

ಅಧ್ಯಕ್ಷರು:– ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ಇನ್ನೂ ಬಗರ್‌ಹುಕುಂ ಸಮಿತಿಗಳು ಅನೇಕ ಕಡೆಗಳಲ್ಲಿ ಆಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್:– ಆಗಿಲ್ಲ. ಇನ್ನೂ Committee constitute ಆಗಿಲ್ಲ.

ಅಧ್ಯಕ್ಷರು:– ದಯವಿಟ್ಟು ಹೆಸರುಗಳನ್ನು ತರಿಸಿಕೊಂಡು ಅದಕ್ಕೆ ಮಾಡಿ. ಏಕೆಂದರೆ, ನನಗೆ ಈ ಹೋರಾಟ ಮಾಡಿದ ಮನಸ್ಸು ಇದೆ. ಇನ್ನೂ ಇಷ್ಟು ವರ್ಷಗಳಾದರೂ ಉಳಿದಿದೆ ಎನ್ನುವ ಸಂಕಟವಾಗುತ್ತದೆ. ದಯವಿಟ್ಟು ಇನ್ನು ಮೇಲೆ ಮಾಡುತ್ತೇನೆ. (ಗೊಂದಲ) ಮಾನ್ಯ ಕಾಗೇರಿಯವರೆ, ಕೇಳ್ರಿ, ಇವೆಲ್ಲಾ ಇವರಿಗೆ ಸಂಬಂಧಪಟ್ಟಿದ್ದು. ಕಾನು, ಸೊಪ್ಪಿನಬೆಟ್ಟ, ಹಾಡಿ ಇದಕ್ಕೆಲ್ಲಾ ಕೊಡಬಾರದೆಂದು ಕಥೆ ಮಾಡಿಟ್ಟಿದ್ದೀರಿ. ಅದಕ್ಕೆ ಮಧ್ಯೆ 10ರಲ್ಲಿ ಮಾಡಿ ಕೊನೆಗೆ

3–4 ತಿಂಗಳುಗಳಲ್ಲಿ ಅದನ್ನು ತಡೆಹಿಡಿದಿದ್ದರು. ಅದಕ್ಕೆ 2000 ನೇ ಇಸವಿಯಲ್ಲಿ ನಾವು ಒಂದು ತೀರ್ಮಾನ ಮಾಡಿ ಒಂದು ಹೊಸ order ಮಾಡಿದೆವು. ಕಾನು, ಸೊಪ್ಪಿನಬೆಟ್ಟ, ಹಾಡಿ ಇವುಗಳನ್ನೆಲ್ಲಾ Section 79/2 ರಲ್ಲಿ ಇರತಕ್ಕಂತಹ Land Revenue Act ನಲ್ಲಿ privilege land ಎಂದು ಕೊಡಬಹುದು ಎಂದು ಮಾಡಿದೆವು. ಆ Circular order ಇನ್ನೂ force ನಲ್ಲಿ ಇದೆ. ಆದರೆ, ಮಧ್ಯದಲ್ಲಿ ಈ ಕಾನು ಇವನ್ನೆಲ್ಲಾ ಕೊಡಬಾರದೆಂದು ಮಾಡಿತ್ತಲ್ಲಾ, ಇದು ಮಾನ್ಯ ಕಾಗೇರಿಯವರಿಗೆ ಗೊತ್ತಿದೆ. ಅದನ್ನು ಮಾಡಿರುವುದನ್ನು ತಡೆಹಿಡಿದಿತ್ತು. ಈಗ ನಾನು ಮಾನ್ಯ ಸಚಿವರನ್ನು ಕರೆದು ಮಾತನಾಡಿ ಹೇಳಿದ್ದೇನೆ. ದಯವಿಟ್ಟು ಈ ಹಿಂದೆ 2000ನೇ ಇಸವಿಯಲ್ಲಿ ಏನಾಗಿತ್ತು, ಅದನ್ನೇ continue ಮಾಡಿ. ಆ ಪ್ರಕಾರ ಕೆಲಸ ಮಾಡಿ. ಮಾನ್ಯ ಬೋಪಯ್ಯನವರೆ, ಮಧ್ಯೆದಲ್ಲಿ ಹೇಗಿದ್ದರೂ ನೀವು ಸ್ಥಗಿತಗೊಳಿಸಿದ್ದೀರಿ, ಅದನ್ನು withdraw ಮಾಡಿ ಎಂದು ಹೇಳಿದ್ದೇನೆ, ಅವರು ಒಪ್ಪಿಕೊಂಡಿದ್ದಾರೆ. ಅದರ ಹಿನ್ನೆಲೆಯಲ್ಲಿ ಬಂದಿದೆ. (ಗೊಂದಲ) ಅದಕ್ಕೋಸ್ಕರ ನಾನು ವಿಶೇಷವಾಗಿ ನಮ್ಮ ಕಂದಾಯ ಸಚಿವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. (ಗೊಂದಲ) ತಾವು ಮಾಡಿದಂತಹ ಒಂದು ಕೆಲಸಕ್ಕೆ ಈ 6–7 ಲಕ್ಷ ಅರ್ಜಿದಾರರು ತಮಗೆ ಕೃತಜ್ಞತೆಯನ್ನು ಸಲ್ಲಿಸಬೇಕು ಎನ್ನುವ ಮಾತನ್ನು ಹೇಳುತ್ತೇನೆ. (ಗೊಂದಲ) ಪರಿಶಿಷ್ಟ ಜಾತಿ ಮತ್ತು ಇತರೆ ಪ್ರಾರಂಭಿಕ ಅರಣ್ಯ ಕಾನೂನು ಇದೆಯೆಲ್ಲಾ, ಕೆಲವು ಸಾಹಿತ್ಯಗಳನ್ನೆಲ್ಲಾ ತಮಗೆ ಕಳುಹಿಸಿಕೊಟ್ಟಿದ್ದೇನೆ. ಮಾನ್ಯ ಬೋಪಯ್ಯನವರೆ, ಅದನ್ನು ದಯವಿಟ್ಟು ಊರಿಗೆ ತೆಗೆದುಕೊಂಡು ಹೋಗಿ. (ಗೊಂದಲ) ಅದನ್ನು ಏನಾದರೂ ಮಾಡಿ ಆ ಕಾನೂನನ್ನು ಜಾರಿಗೊಳಿಸುವಂತಹ ಕೆಲಸದಲ್ಲಿ ಪ್ರತಿಯೊಂದು ಗ್ರಾಮದಲ್ಲಿಯೂ ಕೂಡ ಆ ಸಮಿತಿಗಳು ರಚನೆಯಾಗಬೇಕು. ಆ ಸಮಿತಿಗಳು ಸರಿಯಾಗಿ ಕೆಲಸ ಮಾಡುವುದಕ್ಕೆ ಆಸಕ್ತಿ ವಹಿಸಬೇಕು. ಕಾಗೇರಿಯವರೆ, ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾಡಿದ್ದೇವೆ ಸರ್. ನಮ್ಮಲ್ಲಿ ಆಗಿದೆ. ನಮ್ಮಲ್ಲಿ ಮೊದಲು ಆಗಿರುವುದು.

ಅಧ್ಯಕ್ಷರು:– ನೀವು ಅಲ್ಲಿಯೇ ಪಕ್ಕದಲ್ಲಿರುವವರು. ಏಕೆಂದರೆ, ಇದರಲ್ಲಿ ನಾವು ಆಸಕ್ತಿಯನ್ನು ತೋರಿಸದೇ ಹೋದರೆ ಈ ಕಾನೂನನ್ನು ಯಥಾವತ್ತಾಗಿ ಜಾರಿಗೆ ತರುವುದಕ್ಕಾಗುವುದಿಲ್ಲ. ಅದು 2006ರಲ್ಲಿ ಲೋಕಸಭೆಯಲ್ಲಿ ಪಾಸ್ ಆಗಿದೆ. ಜಾರಿ ಕೊಟ್ಟಿರುವುದು 2008ರಲ್ಲಿ. ಈಗ ಎಷ್ಟನೇ ಇಸವಿಯಲ್ಲಿ ಇದ್ದೇವೆ? ಆರು ವರ್ಷಗಳಾದರೂ ಕೂಡ ಅದು ಇವತ್ತು ಜಾರಿಗೆ ಬರಲಿಲ್ಲವೆಂದರೆ, ನಾವೆಲ್ಲರೂ ತಲೆತಗ್ಗಿಸಬೇಕಾದಂತಹದ್ದು ಇದೆ. ಇದು ಒಂದು ಸನ್ನಿವೇಶ, ಸಂದರ್ಭವನ್ನು ನಾವು ಬಳಸಿಕೊಳ್ಳದೇ ಹೋದರೆ ಕಾಡಿನಲ್ಲಿ ಸಾಗುವಳಿ ಮಾಡತಕ್ಕಂತಹ ಜನರಿಗೆ ಯಾವುದೇ ಕಾರಣಕ್ಕೂ ಭೂಮಿ ಕೊಡುವುದಕ್ಕಾಗುವುದಿಲ್ಲ. ಅದಕ್ಕೆ ನಾವು ಶಾಸಕರಾದಂತಹ ನಾವು ಇದರ ಬಗ್ಗೆ ವಿಶೇಷವಾದಂತಹ ಆಸಕ್ತಿಯನ್ನುವಹಿಸಿ ಆ ಜನರಿಗೆ ಒದಗಿಸುವಂತಹ ಕೆಲಸ ಮಾಡಬೇಕು.

ಶ್ರೀ ಕೆ. ಶಿವಮೂರ್ತಿ:– ದಾಖಲೆ ರಹಿತ ಕಾನೂನು.

ಅಧ್ಯಕ್ಷರು:– ದಾಖಲೆಗೂ ಸಹ ನಾನು ಹೇಳಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ತೀರ್ಥಹಳ್ಳಿ ತಾಲ್ಲೂಕಿನ ಒಂದು ಗ್ರಾಮದಲ್ಲಿ ಅಲ್ಲಿ ನಕ್ಸಲೈಟ್ ಎಂದು ಇವರಿಗೆ ಹೆದರಿಕೆ ಬಂತು. ಹಾಗಾಗಿ ಒಂದು ದಿವಸ E.C., AC., ಎಲ್ಲರೂ ಹೋಗಿ 79 ಜನರಿಗೆ ಹಕ್ಕುಪತ್ರ ಕೊಟ್ಟು ಬಂದಿದ್ದಾರೆ. ಅಲ್ಲಿ ಒಬ್ಬರು Ranger ಯಾವ ರೀತಿ ಎಂದರೆ, ಈ Tribes ಆದರೆ 5 ವರ್ಷಗಳು ಇರುತ್ತದೆ. ಬೇರೆಯವರು ಆದರೆ 75 ವರ್ಷಗಳು ಅಂದರೆ 3 ಶತಮಾನಗಳು ಇದೆ. ಆ ಮೂರು ಶತಮಾನಗಳು ಎನ್ನುವುದನ್ನು ರುಜುವಾತು ಮಾಡಬೇಕಾದರೆ ಕೆಲವನ್ನು ಅವರು ಮಾಡಿಕೊಟ್ಟಿದ್ದಾರೆ. ಆ ಕಾನೂನಿನಲ್ಲಿ ಏನು ಹೇಳುತ್ತಾರೆ ಎಂದರೆ, ಒಂದಕ್ಕಿಂತ ಜಾಸ್ತಿ ಸಾಕ್ಷಿಯಿದ್ದರೆ ಸಾಕು ಎಂದು ಹೇಳುತ್ತಾರೆ. ಇಷ್ಟೇ ಬೇಕು ಎಂದು ಹೇಳುವುದಿಲ್ಲ. 10–13ರಲ್ಲಿ ಒಂದಕ್ಕಿಂತ ಜಾಸ್ತಿ ಎಂದು ಹೇಳುತ್ತಾರೆ. ಆ ಹಿರಿಯರ ಹೇಳಿಕೆಯನ್ನು ದಾಖಲೆ ಮಾಡಿದ್ದಾರೆ. ಆ ಹಿರಿಯರ ದಾಖಲೆಯನ್ನು ಯಾವ ರೀತಿ ಎಂದರೆ, 75–80 ವರ್ಷ ವಯಸ್ಸಾದ ಒಬ್ಬ ಮುದುಕನನ್ನು ಹಿಡಿದು, ಡಾಕ್ಟರ್‌ನಿಂದ ಇವರಿಗೆ ವಯಸ್ಸಾಗಿರುವ ಒಂದು

certificate ಮಾಡಿ, ಅವರಿಂದ ಒಂದು ಪ್ರಮಾಣಪತ್ರವನ್ನು, ಹೇಳಿಕೆಯನ್ನು ಆ ಸಮಿತಿ ಮುಂದೆ ಕೊಟ್ಟು ಬಿಡುವುದು. ಅದನ್ನು ಕೊಟ್ಟು ಬಿಟ್ಟರೆ ಬಾಕಿಯದೆಲ್ಲಾ, ಅಂದರೆ voter list ಅದೆಲ್ಲವನ್ನೂ ಮಾಡಿಬಿಟ್ಟರೆ. ಸರಿ ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೈಜೋಡಿಸಿ ಕೇಳುತ್ತೇನೆ. ಏಕೆಂದರೆ, ಈ ಜಿಲ್ಲಾಧಿಕಾರಿಗಳಿಗೆ ಮತ್ತು Assistant Commissioner ಗೆ ಗ್ರಾಮ ಅರಣ್ಯ ಹಕ್ಕು ಸಮಿತಿಯವರು ಏನು ತೀರ್ಮಾನ ಮಾಡಿ ಕಳುಹಿಸುತ್ತಾರೋ ಅದನ್ನು ಯಥಾವತ್ತಾಗಿ ಮಾಡಬಹುದು. ಏಕೆಂದರೆ, ನೀವು ನಿಮ್ಮ ಬಜೆಟ್ ಭಾಷಣದಲ್ಲಿ ಹೇಳಿಬಿಟ್ಟಿದ್ದೀರಿ. ಇದು ಒಂದು ಕೆಲಸ ದಯವಿಟ್ಟು ನೀವು ನಮಗೆ ನೆರವೇರಿಸಿಕೊಟ್ಟುಬಿಡಿ. ನಿಮ್ಮ ಋಣವನ್ನು ಮಾತ್ರ ನಾವು ಎಂದಿಗೂ ಮರೆಯುವುದಕ್ಕೆ ಆಗುವುದಿಲ್ಲ. ಇಷ್ಟು ಹೇಳಿ ಇದನ್ನು ನಿಮ್ಮ ಗಮನಕ್ಕೆ ಹಾಕಿ ಹೋಗೋಣವೆಂದು ಈಗ ಸದನ ನಡೆಸಿದೆವು. ಏಕೆಂದರೆ, ಪಾಸ್ ಆದಂತಹ ಮಸೂದೆ ವಿಧಾನ ಪರಿಷತ್‌ನಿಂದ ಇನ್ನು ಅರ್ಧ ಗಂಟೆಯಲ್ಲಿ ಬಂದುಬಿಡುತ್ತದೆ. ಅಲ್ಲಿಯವರೆಗೆ ಈಗ ಸದನವನ್ನು ಅರ್ಧ ಗಂಟೆಗಳ ಕಾಲ ಮುಂದೂಡುತ್ತೇನೆ.

(ಸದನವನ್ನು ಸಂಜೆ 6 ಗಂಟೆ 17 ನಿಮಿಷದಿಂದ ಮುಂದಕ್ಕೆ ಅರ್ಧ ಗಂಟೆ ಕಾಲ ಮುಂದೂಡಲಾಯಿತು)

(ಸದನವು ಪುನಃ ರಾತ್ರಿ 7 ಗಂಟೆ 18 ನಿಮಿಷಕ್ಕೆ ಸಮಾವೇಶಗೊಂಡಿತು)

(ಸಭಾಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

16. ಸದನ ಸಮಿತಿ ರಚನೆ ಕುರಿತು ಮಾನ್ಯ ಇಂಧನ ಸಚಿವರ ಹೇಳಿಕೆ

ಅಧ್ಯಕ್ಷರು:– ಈಗ ಮಾನ್ಯ ಇಂಧನ ಸಚಿವರು ಒಂದು ಸಣ್ಣ ಹೇಳಿಕೆಯನ್ನು ಮಾಡುತ್ತಾರೆ.

(ಈ ಹಂತದಲ್ಲಿ ಬಿಜೆಪಿ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ನಿಂತು CBI ತನಿಖೆಯಾಗಲೇಬೇಕು ಎಂದು ಘೋಷಣೆಯನ್ನು ಕೂಗುತ್ತಿದ್ದರು)